ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ ,

ಕುಂದಾಪುರ

ಸಿ.ಸಿ. ನಂಬ್ರ: 4/2021

ಚಾಸಾ: 7 ಪ್ರಾಸಾ:5

ದಿನಾಂಕ: 20.09.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಂಜುನಾಥ |
| ತಂದೆಯ ಹೆಸರು | : | ವೆಂಕಟರಮಣ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಮುಖ್ಯ ಪೇದೆ, ಬ್ರಹ್ಮಾವರ |
| ವಾಸ ಸ್ಥಳ | : | ಬ್ರಹ್ಮಾವರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:**

ನಾನು 18-07-2018 ರಿಂದ 21-08-2023ರವರೆಗೆ ಗಂಗೊಳ್ಳಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ: 22-05-2020 ರಂದು ಚಾಸಾ-10 ರವರ ಆದೇಶದಂತೆ ಚಾಸಾ-8 ರವರೊಂದಿಗೆ ಈಪ್ರಕರಣದ ಆಪಾದಿತರ ಪತ್ತೆಗಾಗಿ ಹೊರಟಿದ್ದು, ಆರೋಪಿತರು ನಾವುಂದ ಮಸೀದಿ ಬಳಿ ಇರುವುದಾಗಿ ಮಾಹಿತಿ ಬಂದಿದ್ದು, ಅದರಂತೆ ಅಲ್ಲಿಗೆ ಹೋಗಿ ನೋಡಿದಾಗ 4 ಜನರು ಆರೋಪಿತರು ಅಲ್ಲಿ ಇದ್ದು, ಬೆಳಗ್ಗೆ 8 ಗಂಟೆ ಸಮಯದಲ್ಲಿ ಮಹಮ್ಮದ್ ರಿಯಾಜ್, ಅಸ್ಪಕ್, ಅಶ್ರಫ್, ಅಹಮ್ಮದ್ ರವರುಗಳನ್ನು ವಿಚಾರಿಸಿ ವಶಕ್ಕೆ ಪಡೆದು ಅವರೊಂದಿಗೆ ಇದ್ದ 2 ಕಾರುಗಳಾದ ಕೆಎ-20-ಎಂಬಿ-6559 ಮತ್ತು ಕೆಎ-20-ಎಂಎ-3933 ನ್ನು ವಶಕ್ಕೆ ಪಡೆದು 8-30ಕ್ಕೆ ಠಾಣೆಗೆ ಬಂದು ಚಾಸಾ-10 ರವರ ಮುಂದೆ ಲಿಖಿತ ವರದಿಯೊಂದಿಗೆ ಹಾಜರುಪಡಿಸಿರುತ್ತೇವೆ.

ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 2 ರಿಂದ 4ನೇ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. 1ನೇ ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದ್ರಿ ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-11 ಎಂದು, ಸಾಕ್ಷಿ ಸಹಿಯನ್ನು ನಿಪಿ-

11(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-5ರಲ್ಲಿ 2 ಕಾರುಗಳನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದಃ</u>**

ಈ ಪ್ರಕರಣದ ಪಿರ್ಯಾದುದಾರರು ಯಾರು ಎಂದು ನನಗೆ ತಿಳಿದಿಲ್ಲ. ನ್ಯಾಯಾಲಯದ ಮುಂದೆ ಇರುವ 3ನೇ ಆರೋಪಿ ಚಾಸಾ-1 ರವರ ವಿರುದ್ದ ಅದೇ ದಿನ ಠಾಣೆಯಲ್ಲಿ ದೂರು ದಾಖಲಿಸಿರುತ್ತಾರೆ ಎಂದರೆ ನನಗೆ ತಿಳಿದಿಲ್ಲ. ಅದು ಸಿಸಿ ನಂಬ್ರ 3/2021ರಂತೆ ಬಾಕಿ ಇರುತ್ತದೆ ಎಂದರೆ ನನಗೆ ತಿಳಿದಿಲ್ಲ. 1 ರಿಂದ 4ನೇ ಆರೋಪಿತರು ಚಾಸಾ-1 ರವರ ವಿರುದ್ದ 3ನೇ ಆರೋಪಿಗೆ ಹಲ್ಲೆ ಮಾಡಿದ ಹಿನ್ನೆಲೆ ದೂರು ನೀಡಲು ಠಾಣೆಗೆ ಬಂದಿದ್ದಾಗ ಅವರುಗಳನ್ನು ವಶಕ್ಕೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ.

ಚಾಸಾ-10 ರವರು ಆರೋಪಿತರನ್ನು ವಶಕ್ಕೆ ಪಡೆಯಲು ಯಾವುದೇ ಲಿಖಿತ ಆದೇಶ ನೀಡಿರಲಿಲ್ಲ. ಆರೋಪಿತರು ಮತ್ತು ಅವರ ವಾಹನಗಳನ್ನು ಮೇಲೆ ಹೇಳಿದ ದಿನ ಮತ್ತು ಸಮಯದಂದು ವಶಕ್ಕೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ. ಸುಳ್ಳು ದೂರಿನ ಆಧಾರದ ಮೇಲೆ ಆರೋಪಿತರನ್ನು ಠಾಣೆಯಲ್ಲಿ ವಶಕ್ಕೆ ಪಡೆದಿರುತ್ತೇವೆ ಎಂದರೆ ಸರಿಯಲ್ಲ. 1 ರಿಂದ 4ನೇ ಆರೋಪಿತರನ್ನು ಚಾಸಾ-10 ರವರ ಮುಂದೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ರೀತಿಯಲ್ಲಿ ಯಾವುದೇ ತನಿಖೆ ಕೈಗೊಂಡಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** <u>ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**

**ಪ್ರ. ದ. ನ್ಯಾ. ದಂ. ಕುಂದಾಪುರ**